4.	ಸುಳ್ಯ ತಾ: ನ ಜಾಲ್ಸೂರು ಸುಬ್ರಹ್ಮಣ್ಯ ರಸ್ತೆಯ ಕಿಮೀ. 39.85 ರಿಂದ 40.00 ಕಿಮೀ.ವರೆಗೆ.	0.15 ಕಿಮೀ.
5.	ಸುಬ್ರಹ್ಮಣ್ಯ ಧರ್ಮಸ್ಥಳ ಬೆಳ್ತಂಗಡಿ ಕಾರ್ಕಳ ಉಡುಪಿ ರಸ್ತೆಯ ಕಿಮೀ. 4.40 ರಿಂದ 5.00 ಕಿಮೀ.ವರೆಗೆ ಮರು ಡಾಂಬರೀಕರಣ.	0.60 ಕಿಮೀ. 1.95 ಕಿಮೀ.
	1995-96ನೇ ಸಾಲಿನಲ್ಲಿ	
1.	ಸುಬ್ರಹ್ಮಣ್ಯ ಧರ್ಮಸ್ಥಳ ಬೆಳ್ತಂಗಡಿ ಕಾರ್ಕಳ ಉಡುಪಿ ರಸ್ತೆಯ ಕಿಮೀ. 0.50 ರಲ್ಲಿ 2.00 ಕಿಮೀ. ಮರು ಡಾಂಬರೀಕರಣ.	1.50 ಕಿಮೀ.
2.	ಸುಳ್ಯ ತಾ: ನ ಎಲೆಮಲೆ ಅರಂತೋಡು ರಸ್ತೆಯ ಕಿಮೀ. 8.00 ರಿಂದ 13.25 ಕಿಮೀ. ವರೆಗೆ ಡಾಂಬರು ರಸ್ತೆಗೆ ನೀಲ್ ಕೋಟೆ ಒದಗಿಸುವುದು.	5.00 ಕಿಮೀ.
		6.50 ಕಿಮೀ.
	ಒಟ್ಟು ಕಿ.ಮೀ.	12.43 ಕಿಮೀ.

ವಿಷಯ:- ರಾಜ್ಯದ ರಸ್ತೆಗಳ ದುರಸ್ತಿ

101(32)

ಶ್ರೀ ಹೆಚ್.ಡಿ. ಬಸವರಾಜ (ವಿರಾಜಪೇಟೆ):- ಮಾನ್ಯ ಲೋಕೋಪಯೋಗಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

1) ರಾಜ್ಯದಲ್ಲಿ 1995-96ನೇ ಸಾಲಿನಲ್ಲಿ ರಸ್ತೆ ದುರಸ್ತಿ, ನವೀಕರಣ ಹಾಗೂ ರಸ್ತೆ ಅಗಲಗೊಳಿಸುವಿಕೆಗಾಗಿ ಎಷ್ಟು ಹಣ ವೆಚ್ಚ ಮಾಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು);

2) 1996-97ನೇ ಸಾಲಿನಲ್ಲಿ (1996 ಡಿಸೆಂಬರ್ 31ರ ವರೆವಿಗೆ) ಎಷ್ಟು ಹಣವನ್ನು ರಸ್ತೆ ದುರಸ್ತಿಗೆ, ರಸ್ತೆ ನವೀಕರಣ ರಸ್ತೆ ಅಗಲಗೊಳಿಸುವಿಕೆ ಮತ್ತು ಹೊಸ ರಸ್ತೆ ನಿರ್ಮಾಣ ಇವುಗಳ ಬಾಬ್ತಿನಲ್ಲಿ ವೆಚ್ಚ ಮಾಡಲಾಗಿದೆ? (ವಿವರ ನೀಡುವುದು)?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):-

1) ರಾಜ್ಯದಲ್ಲಿ 1995-96ನೇ ಸಾಲಿನಲ್ಲಿ ರಸ್ತೆ ದುರಸ್ತಿ, ರಸ್ತೆ ನವೀಕರಣ ಹಾಗೂ ರಸ್ತೆ ಅಗಲಗೊಳಿಸುವಿಕೆ ಕಾಮಗಾರಿಗಳಿಗೆ ಒಟ್ಟು ವೆಚ್ಚವು ರೂ. 6886.79 ಲಕ್ಷ ಮಾಡಲಾಗಿದೆ. ಈ ಬಗ್ಗೆ ಜಿಲ್ಲಾ ವಿವರಗಳ ಪಟ್ಟಿ ನಮೂನೆ 1 ರಲ್ಲಿ ನೀಡಲಾಗಿದೆ.

2) ರಸ್ತೆ ದುರಸ್ತಿ, ರಸ್ತೆ ನವೀಕರಣ, ರಸ್ತೆ ಅಗಲಗೊಳಿಸುವಿಕೆ ಮತ್ತು ಹೊಸ ರಸ್ತೆ ನಿರ್ಮಾಣಕ್ಕೆ 1996-97ನೇ ಸಾಲಿನಲ್ಲಿ ಒಟ್ಟು ವೆಚ್ಚ ರೂ. 4246.26 ಲಕ್ಷ ಮಾಡಲಾಗಿದೆ. ವಿವರಗಳನ್ನು ನಮೂನೆ 1 ರಲ್ಲಿ ನೀಡಲಾಗಿದೆ.

ನಮೂನೆ-1

ಕ್ರಮ ಸಂಖ್ಯೆ	ಜಿಲ್ಲಾ ವಿವರ	ರಸ್ತೆ ದುರಸ್ತಿ, ರಸ್ತೆ ನವೀಕರಣ ಒಟ್ಟು ವೆಚ್ಚ (1995-96ನೇ ಸಾಲಿಗೆ)	ರಸ್ತೆ ಅಗಲಗೊಳಿಸುವಿಕೆ. (ಡಿಸೆಂಬರ್ 97ರ 1996-97ನೇ ಸಾಲಿಗೆ ಅಂತ್ಯಕ್ಕೆ) ಒಟ್ಟು ವೆಚ್ಚ
	ದಕ್ಷಿಣ ವಲಯ:		
1.	ಬೆಂಗಳೂರು	69.28	83.71
2.	ಬೆಂಗಳೂರು ಗ್ರಾಮಾಂತರ	93.71	83.80
3.	ತುಮಕೂರು	120.05	113.35
4.	ಕೋಲಾರ	114.34	210.87
5.	ಮೈಸೂರು	602.00	503.37
6.	ಮಂಡ್ಯ	423.36	296.05
7.	ಹಾಸನ	244.02	139.034
8.	ಚಿಕ್ಕಮಗಳೂರು	234.492	148.767
9.	ಮಂಗಳೂರು	476.64	494.918
10.	ಕೊಡಗು	189.98	123.040
11.	ಶಿವಮೊಗ್ಗ	294.488	187.169
12.	ಚಿತ್ರದುರ್ಗ	225.463	144.330
	ಒಟ್ಟು	3502.59	2528.41

ಕ್ರಮ ಸಂಖ್ಯೆ	ಜಿಲ್ಲಾ ವಿವರ	ರಸ್ತೆ ದುರಸ್ತಿ, ರಸ್ತೆ ನವೀಕರಣ ಒಟ್ಟು ವೆಚ್ಚ (1995-96ನೇ ಸಾಲಿಗೆ)	ರಸ್ತೆ ಅಗಲಗೊಳಿಸುವಿಕೆ. (ಡಿಸೆಂಬರ್ 97ರ 1996-97ನೇ ಸಾಲಿಗೆ ಅಂತ್ಯಕ್ಕೆ) ಒಟ್ಟು ವೆಚ್ಚ
	ಉತ್ತರ ವಲಯ:		
1.	ಧಾರವಾಡ	562.27	324.03
2.	ಕಾರವಾರ	243.83	80.60
3.	ಬೆಳಗಾಂ	496.39	211.97
4.	ಬಿಜಾಪುರ	352.99	213.44
5.	ಗುಲ್ಬರ್ಗ	557.32	274.26
6.	ಬೀದರ್	312.63	126.57
7.	ಬಳ್ಳಾರಿ	506.87	212.60
8.	ರಾಯಚೂರು	351.87	274.38
	ಒಟ್ಟು	3384.20	1717.85
	ಒಟ್ಟು ಉತ್ತರ + ದಕ್ಷಿಣ)	6886.79	4246.26

ಪಿಡಬ್ಲ್ಯೂಡಿ 8 ಸಿಕ್ಯೂಎನ್ 97

ವಿಷಯ:- ರಾಜ್ಯದ ಎಲ್ಲಾ ಇಲಾಖೆಯ ಯೋಜನೆಗಳಿಗೆ ಆಯವ್ಯಯದಲ್ಲಿ ಮೀಸಲಿಟ್ಟ ಹಣ.

102(244)

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು):- ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) 1996-97ನೇ ಸಾಲಿನ ಆಯವ್ಯಯದಲ್ಲಿ ರಾಜ್ಯದ ಎಲ್ಲಾ ಇಲಾಖೆಯ ಯೋಜನೆಗಳಿಗೆ ಮೀಸಲಿಟ್ಟ ಹಣವೆಷ್ಟು;

ಆ) 31-12-1996ರವರೆಗೆ ಪ್ರತಿ ಇಲಾಖೆಗೆ ಬಿಡುಗಡೆ ಮಾಡಲಾದ ಹಣವೆಷ್ಟು?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯ ಮಂತ್ರಿಗಳು):-

ಅ) 1996-97ನೇ ಸಾಲಿನ ಆಯವ್ಯಯದಲ್ಲಿ ರಾಜ್ಯದ ಎಲ್ಲಾ ಇಲಾಖೆಯ ಯೋಜನೆಗಳಿಗೆ ಒಟ್ಟು ರೂ. 4360 ಕೋಟಿಗಳನ್ನು ಮೀಸಲಿಡಲಾಗಿತ್ತು (ವಲಯವಾರು ವಿವರಗಳನ್ನು ಅನುಬಂಧ-1 ರಲ್ಲಿ ಕೊಡಲಾಗಿದೆ).